ಅವರ ಉಪಚಾರ ಬೇರೆ. ಸುಜಾತಳ ಮೇಲೆ ಹೊರೆ ಹೆಚ್ಚಿ ಅವಳ ಕಿರಿಕಿರಿ ಆರಂಭವಾಯಿತು. ಇಬ್ಬರೂ ನುರಿತವರಲ್ಲ. ಹೊಣೆಗೇಡಿಗಳು. ಬೀಡು ಬೀಸಾಗಿ ಓಡಾಡಿಕೊಂಡಿದ್ದವರ ಮೇಲೆ ಸಂಸಾರವೆಂಬ ಗುಡ್ಡ ಕಡಿದು ಬೀಳುತ್ತಿತ್ತು. ಎಲ್ಲರ ಬದುಕಿನಲ್ಲಿ ಅದು ಸಹಜವಾದರೂ ನಮಗೆ ಬಲು ಕಷ್ಟ ಎನಿಸಿತ್ತು. ಹರಯದಲ್ಲಿ ಹೂವಿನ ಎಸಳುಗಳಂತೆ ಮೃದುವಾಗಿದ್ದ ಸಂಸಾರದ ಮುಳ್ಳುಗಳು ಕ್ರಮೇಣ ಚೂಪಾಗಿ, ಗಟ್ಟಿಯಾಗಿ ಚುಚ್ಚಲಾರಂಭಿಸಿದವು.

ಇಂಥ ಸಮಯದಲ್ಲೇ ಅಪ್ಪ ಹೋಗಬೇಕೆ? ಒಂದು ದಿನ ಮಲಗಲಿಲ್ಲ. ನೋವಿಲ್ಲ, ನೆರಳಾಡಲಿಲ್ಲ. ಟೀವಿ ನೋಡುತ್ತ ಚಹಾ ಕುಡಿಯುತ್ತ ಕುಳಿತವರು ಎರಡನೇ ಬಾರಿ ಕಪ್ಪೆತ್ತಿದಾಗ ಕೇಳಿಬಂದದ್ದು 'ಧಡಾಲ್' ಎಂಬ ಶಬ್ದ. ಬಿದ್ದದ್ದು ಬರೀ ಕಪ್ಪು, ಬಸಿಯಲ್ಲ. ಜೊತೆಗೆ ಅಪ್ಪ ಕೂಡ. ಅರ್ಧ ಕುಡಿದ ಚಹಾ ಕಟಬಾಯಲ್ಲಿ ಸೋರಿ ಹೊರಬಂತು. ಒಂದೇ ನಿಮಿಷದಲ್ಲಿ ಹೃದಯಸ್ತಂಭನವಾಗಿ ಎಲ್ಲ ಮುಗಿದು ಹೋಗಿತ್ತು. ಎಲ್ಲರಿಗೂ ಜೀರ್ಣಿಸಿಕೊಳ್ಳಲಾಗದ ಸುದ್ದಿ. ಸಡನ್ ಶಾಕ್... ಆಘಾತವಾದ ಹಾಗೆ... ಬರಸಿಡಿಲು ಅಪ್ಪಳಿಸಿದ ಹಾಗೆ. ಅವ್ವ ಬುಡ ಕಡಿದ ಬಾಳೆಯಂತೆ ಕುಸಿದು ಬಿದ್ದಳು. ನಂತರ ಪ್ರಜ್ಞೆ ತಿಳಿದೆದ್ದರೂ ಹೃದಯ ನಾಜೂಕಾಗಿತ್ತು. ಬಂಧು, ಬಳಗವೆಲ್ಲಾ ಸೇರಿತು. "ಎಂಥಾ ಸುಖದ ಸಾವು ಮಹಾರಾಯಂದು. ಪುಣ್ಯಾದ ಜೀವ. ಯಾರಿಗೇನೂ ಕೆಟ್ಟದ್ದು ಮಾಡ್ಲಿಲ್ಲ. ಅದಕ ನರಳದನ, ಒದ್ದಾಡದನ ದೇವರ ವಿಮಾನದಾಗ ಹೋಗಿಬಿಟ್ಟ" ಎಂದು ಹುಬ್ಬಳ್ಳಿಯ ಜನವೆಲ್ಲ ಹೊಗಳಿದ್ದೇ ಬಂತು. ಕರ್ಮಾಂತರವನ್ನೆಲ್ಲ ಕೇಶ್ವಾಪೂರದ ಮುಕ್ತಿಧಾಮದಲ್ಲಿ ಪೂರೈಸಿ ಹದಿಮೂರನೇ ದಿನ ಸೀಬಾಯಿ ಮನೆಯಲ್ಲೇ ಮಾಡಿದ್ದಾಯಿತು. ನಂತರ... ಎಲ್ಲರೂ ಅವರವರ ಮನೆ ದಾರಿ ಹಿಡಿದರು. "ರಜಾ ಇಲ್ಲ" ಎಂದ ಕಿರಣ, ಸುಲಭಾ ಚಂಡೀಗಢಕ್ಕೆ ತೆರಳಿದರು. ಪ್ರಭಾ ಕೂಡ ಮುಂದೆ ಇದ್ದದ್ದು ನಾಲ್ಕೇ ದಿನ. ಅಷ್ಟರಲ್ಲೇ ಕಿರಿಕಿರಿಯ ದೂರುಗಳನ್ನು ಕೇಳಿ "ಸುಜಾತಾ ಒಬ್ಬಾಕಿನ ಆಗ್ಯಾಳ. ಅಕಿಗೆ ಭಾಳ ಕೆಲಸ, ಜವಾಬ್ದಾರಿ ಬೀಳ್ತದ. ಅದಕ್ಕ ಸಹನಾನ್ನ ಹಾಸ್ಟೆಲ್‌ನ್ಯಾಗಿಡತೀನಿ ಅರುಣ. ತಪ್ಪು ತಿಳಕೊಬ್ಯಾಡಾ. ಆಗಾಗ ಹೋಗಿ ನೋಡ್ತಿರು" ಎಂದು ಮ್ಲಾನವಾಗಿ ಹೇಳಿ ಕಾರ್ಯಪ್ರವೃತ್ತಳಾಗಿದ್ದಳು. 'ಸದ್ಯ! ಒಂದ ವಿಷಯಕ್ಕ ಹೆಂಡತಿ ಕಿರಿಕಿರಿ ತಪ್ಪಿತು' ಎನಿಸಿದರೂ ಚಿಕ್ಕಂದಿನಿಂದಲೂ "ಮಾಮಾ, ಮಾಮಾ" ಎನ್ನುತ್ತ ನನ್ನ ಮಡಿಲಲ್ಲೇ ಆಡಿ ಬೆಳೆದು ನನ್ನ ಸುತ್ತ ಸುತ್ತುತ್ತಿದ್ದ ಸಹನಾ ಹಾಸ್ಟೆಲ್ ಸೇರಿದ್ದು ಅಪಾರ ನೋವಿನ ಸಂಗತಿಯಾಗಿತ್ತು. ಒಮ್ಮೆಲೆ ಬೀಸಿದ ಬಿರುಗಾಳಿಗೆ ಸಂಸಾರವೇ ಅದುರಿತ್ತು. ಕೊಂಡಿಗಳು ಸಡಿಲವಾಗಿ ಕಳಚಿಕೊಂಡಿದ್ದವು. ನಾನೆಲ್ಲ ನೋಡುತ್ತಿದ್ದರೂ ಏನೂ ಮಾಡಲಾರದ ಸ್ಥಿತಿಯಲ್ಲಿದ್ದೆ.

ಮುಂದೆ ನಾಲ್ಕೇ ತಿಂಗಳಲ್ಲಿ ಅವ್ವ ಪಾರ್ಶ್ವವಾಯುವಿಗೆ ತುತ್ತಾಗಿ ಹಾಸಿಗೆ ಹಿಡಿದಳು. ಗಂಡನ ಅಗಲಿಕೆಯೊಂದಿಗೆ ಮೊಮ್ಮಗಳು ದೂರವಾದ ನೋವೂ ಸೇರಿತ್ತು. ಬಲಭಾಗ ಸಂಪೂರ್ಣ ನಿಷ್ಕ್ರಿಯವಾಗಿತ್ತು. ಡಾಕ್ಟರ್ ಟ್ರೀಟ್‌ಮೆಂಟ್ ನಡೆಯಿತು. ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆಗೂ ಹೋಗಿ ತೋರಿಸಲಾಯಿತು. ಯಾರೋ ಹೇಳಿದಂತೆ ಅಂಕೋಲೆಯಿಂದ ವಿಶೇಷ ತೈಲ ತರಿಸಿ ಮಾಲೀಶ್ ಮಾಡಿದ ಮೇಲೆ ಸ್ವಲ್ಪ ತಹಬಂದಿಗೆ ಬಂತು. ಸೊಟ್ಟಗಾಗಿದ್ದ ಬಾಯಿ ತುಸು ನೆಟ್ಟಗಾಗಿ ಮಾತನಾಡಿದ್ದು ತಿಳಿಯುವಂತಾಯಿತು. ಕೈ, ಬೆರಳುಗಳು ಕೊಂಚ ಅಲುಗಾಡತೊಡಗಿದವು. ಆದರೆ ಕಾಲು ಮಾತ್ರ ನಮ್ಮ ಯಾವ ಚಿಕಿತ್ಸೆಗೂ ಸೊಪ್ಪು ಹಾಕದೇ ಇದ್ದ ಜಾಗದಿಂದ ಕದಲಿರಲಿಲ್ಲ. ತಲೆ ಸಂಪೂರ್ಣ ಚುರುಕಾಗಿತ್ತು. ಬುದ್ಧಿ ಸರಿಯಾಗಿಲ್ಲದೇ ಅವಯವಗಳು ಗಟ್ಟಿಯಾಗಿರುವವರನ್ನು ನೋಡಿಕೊಳ್ಳುವದು ಒಂದು ಬಗೆಯಾದರೆ ತಲೆ